

بِسْمِ اللّٰهِ الرَّحْمٰنِ الرَّحِيمِ

# ಪ್ರಜೆಗಳು ತಮ್ಮ ಹಕ್ಕುಗಳನ್ನು ಪಡೆಯಲು ನಿಯಮಾನುಸಾರವಾದ ಮಾರ್ಗಗಳನ್ನು ಮಾತ್ರ ಬಳಸಬೇಕು. ಮುಷ್ಕರ ಹರತಾಳಗಳಿಂದ ದೂರವಿರಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01–04–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖ ಓದಿ ಹೇಳಿದ್ದೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಕಾಲದಲ್ಲಿ ಜನಿಸಿದ ನೀವು ಸಂತೋಷಪಡಿರಿ. ನೀವು ಸಂತೋಷದಿಂದ ನೆಗೆಯಿರಿ. ಅಲ್ಲಾಹನು ನಿಮ್ಮನ್ನು ಈ ಕಾಲದಲ್ಲಿ ಜನಿಸುವಂತೆ ಮಾಡಿ ಮಸೀಹ್ ಮೌಊದರ ಕಾಲಘಟ್ಟವನ್ನು ಕಂಡ ಅದೃಷ್ಟಶಾಲಿಗಳೊಂದಿಗೆ ನೀವು ಸೇರಿದಿರಿ. ಈ ಕಾಲವನ್ನು ಪ್ರತೀಕ್ಷಿಸುತ್ತಾ ಎಷ್ಟೋ ಜನಾಂಗಗಳು ಈ ಲೋಕದಿಂದ ಗತಿಸಿ ಹೋಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದುದನ್ನು ನಾನು ನನ್ನ ಶಬ್ದಗಳಲ್ಲಿ ಪ್ರಸ್ತಾಪಿಸಿರುವೆನು. ಅಹ್ಮದಿಯರಾದ ನಾವು ನಿಶ್ಚಯವಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಅಲ್ಲಾಹನ ಆಜ್ಞೆಗಳ ಪ್ರಕಾರ ವರ್ತಿಸುವ ಅದೃಷ್ಟಶಾಲಿಗಳಾಗಿದ್ದೇವೆ. ನಾವು ಆ ದುರದೃಷ್ಟಶಾಲಿಗಳ ಹಾಗೆ ಅಲ್ಲ, ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲ ಲಭಿಸಿದರೂ ಬೈಅತ್ ಮಾಡುವ ಭಾಗ್ಯ ಲಭಿಸಲಿಲ್ಲ. ಅವರಲ್ಲಿ ಕೆಲವರು ಎಂತಹ ದುರದೃಷ್ಟಶಾಲಿಗಳು ಇದ್ದಾರೆಂದರೆ ಅವರು ವಿರೋಧ ಮಾಡುವುದರಲ್ಲಿ ವರ್ಧಿಸಿದ್ದಾರೆ. ಅವರು ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಮಹಾನುಭಾವರ ಮಾರ್ಗದರ್ಶನದಿಂದ ವಂಚಿತರಾಗಿ ದಾರಿ ತಪ್ಪಿ ಹೋಗಿರುವರು ಮತ್ತು ಚದುರಿ ಹೋಗಿರುವರು.

ಆದುದರಿಂದ ನಾವು ಈ ವಿಷಯಕ್ಕೆ ಸಂಬಂಧಿಸಿ ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೇ ಆಗಿರುತ್ತದೆ. ಅಲ್ಲಾಹನು ನಮಗೆ ನೇರಮಾರ್ಗ ತೋರಿಸಿದನು. ಜೀವಿತದ ವಿವಿಧ ಸಂದರ್ಭಗಳಲ್ಲಿ ತಲೆದೋರುವ ಸಮಸ್ಯೆಗಳಿಗೆ ಪರಿಹಾರವನ್ನು ಇಸ್ಲಾಮ್ ಧರ್ಮದ ಉಪದೇಶಗಳಿಗೆ ಅನುಸಾರವಾಗಿ ತಾನು ಕಳುಹಿಸಿದ ಇಮಾಮರ ಮೂಲಕ ಅಲ್ಲಾಹನು ನಮಗೆ ಸೂಚಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಬರಹಗಳಲ್ಲೂ ಭಾಷಣಗಳಲ್ಲೂ ಮತ್ತು ಶಿಷ್ಯರೊಂದಿಗೆ ಕುಳಿತಿದ್ದಾಗ ಕೆಲವು ವಿಷಯಗಳನ್ನು ಉದಾಹರಣೆ ಮೂಲಕ ವಿವರಿಸುತ್ತಲೂ ನಮಗೆ ಮಾರ್ಗದರ್ಶನ ನೀಡಿದ್ದಾರೆ. ಅವುಗಳ ಬಗ್ಗೆ ವಿವರ ಸಹಾಬರ ವರದಿಗಳಿಂದ ಲಭಿಸುತ್ತವೆ. ಆದರೆ ಇದಕ್ಕೆ ಸಂಬಂಧಿಸಿ ನಮಗೆ ಬಹಳ ಹೆಚ್ಚು ಉಪಕಾರ ಲಭಿಸಿರುವುದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮೂಲಕವಾಗಿದೆ. ಅವರು ತಮ್ಮ ಖುತ್‌ಬಗಳಲ್ಲೂ ಭಾಷಣಗಳಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಮಾತುಗಳನ್ನು ವಿವರಿಸಿರುವರು. ಅವುಗಳನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸ್ವತಃ ಆಲಿಸಿದರು ಅಥವಾ ಸಮೀಪದ ಸಹಾಬರು ಅವರಿಗೆ ತಿಳಿಸಿದ್ದರು. ಅವರು ನೀಡುವ ಉದಾಹರಣೆಗಳಿಂದ ವಿಷಯವನ್ನು ಮನವರಿಕೆ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಒಂದು ಖುತ್‌ಬದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹರತಾಳಗಳು ಮತ್ತು ಮುಷ್ಕರಗಳು ಧರ್ಮಬದ್ಧವೋ ಅಲ್ಲವೋ ಎನ್ನುವುದರ ಬಗ್ಗೆ ವಿವರಿಸಿದ್ದರು. ಇದರ ಬಗ್ಗೆ ಸೈದ್ಧಾಂತಿಕವಾಗಿ ನೋಡಬೇಕಾಗಿದೆ. ಹರತಾಳಗಳ ಕಾರಣವೇನು? ಅದು ಉಂಟಾಗಲು ಮೂಲ ಕಾರಣಗಳು ಯಾವುವು? ಅವುಗಳಿಗೆ ಕಾರಣವೇನೆಂದರೆ ಹಕ್ಕುಗಳನ್ನು ಈಡೇರಿಸಿಕೊಡುವುದಿಲ್ಲ. ಇದರ ಬಗ್ಗೆ ಇಸ್ಲಾಮ್ ನೀಡುವ ಉಪದೇಶವೇನೆಂದರೆ ನೀವು ಪರಸ್ಪರ ಅನ್ಯರ ಹಾಗೆ ವರ್ತಿಸಬೇಡಿರಿ. ಪರಸ್ಪರ ಸಹೋದರರಾಗಿ ಮನವರಿಕೆ ಮಾಡಿಕೊಂಡು ತಮ್ಮ ತಮ್ಮ ಹಕ್ಕುಗಳನ್ನು ಈಡೇರಿಸಿಕೊಡಲು ಪ್ರಯತ್ನಿಸಿರಿ. ಹೀಗೆ ಮಾಡಿದರೆ ಸಮಾಜ ವ್ಯವಸ್ಥೆ ಎಂದೂ ಹಾಳಾಗಲಾರದು. ಸಂಕ್ಷಿಪ್ತವಾಗಿ ಹೇಳುವುದಾದರೆ ಇಸ್ಲಾಮೀ ಉಪದೇಶಗಳ ಮತ್ತು ಇಸ್ಲಾಮೀ ಸಂಸ್ಕೃತಿ ಪ್ರಕಾರ ತಮ್ಮ ಹಕ್ಕುಗಳನ್ನು ಪಡೆಯಲು ಕಾನೂನು ಕಾಯಿದೆಗಳ ಮಾರ್ಗವನ್ನು ಮಾತ್ರ ಬಳಸಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಸ್ಲಾಮೀ ಸಂಸ್ಕೃತಿಯ ಭವನದ ಅಸ್ತಿಭಾರ ನ್ಯಾಯಪಾಲನೆ ಮತ್ತು ಪ್ರೀತಿಯ ಮೇಲಿದೆ. ಆದುದರಿಂದ ಹಕ್ಕುಗಳನ್ನು ಪಡೆಯಲು ನ್ಯಾಯಯುತವಾಗಿಯೂ ಪ್ರೀತಿಭರಿತವಾಗಿಯೂ ವರ್ತಿಸಬೇಕು. ಈ ಕಾರಣದಿಂದಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಮುಷ್ಕರಗಳು ನಡೆದಾಗ ಯಾರಾದರೂ ಅಹ್ಮದಿ ಅದರಲ್ಲಿ ಭಾಗವಹಿಸಿದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರಿಗೆ ಕಠಿಣ ಶಿಕ್ಷೆ ನೀಡುತ್ತಿದ್ದರು ಮತ್ತು ತನ್ನ ಅತೃಪ್ತಿ ಸೂಚಿಸುತ್ತಿದ್ದರು. ಈ ಕಾಲದಲ್ಲಿ ಇಸ್ಲಾಮೀ ದೇಶಗಳಲ್ಲಿ ಹರತಾಳಗಳು ಮತ್ತು ವಿದ್ರೋಹ ಕೃತ್ಯಗಳು ಸಂಭವಿಸುವುದು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡದ ಕಾರಣದಿಂದಾಗಿದೆ. ಅಲ್ಲಾಹನು ಮುಸ್ಲಿಮ್ ರಾಷ್ಟ್ರಗಳ, ಅದರಲ್ಲೂ ಪಾಕಿಸ್ತಾನದ ಆಡಳಿತಾಧಿಕಾರಿಗಳಿಗೆ ತಮ್ಮ ಪ್ರಜೆಗಳ ಹಕ್ಕುಗಳನ್ನು ನೀಡುವಂತಹ ಬುದ್ಧಿಯನ್ನು ದಯಪಾಲಿಸಲಿ. ಎಲ್ಲಿಯಾದರೂ ಅಹ್ಮದಿಗಳು ಇಂತಹ ಮುಷ್ಕರಗಳಲ್ಲಿ ಸೇರಲು ಬಲಾತ್ಕಾರಕ್ಕೆ ಪಾತ್ರನಾದರೆ, ಅವನು ಸೊತ್ತುಗಳನ್ನು ನಾಶ ಮಾಡುವ ಕೆಲಸದಲ್ಲಿ ಮತ್ತು ಸರಕಾರಗಳ ಸಂಪತ್ತಿಗೆ ಹಾನಿ ಮಾಡುವ ರೀತಿಯಲ್ಲಿ ಕೆಲಸಮಾಡಬಾರದು.

ಪ್ರತಿಯೊಬ್ಬ ಮನುಷ್ಯ ತಾನು ಮಾಡುತ್ತಿರುವ ಕೆಲಸದ ಬಗ್ಗೆ ಅಭಿರುಚಿಯನ್ನು ಹೊಂದಿದರೆ ತನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಆ ಕೆಲಸ ಮಾಡುತ್ತಾನೆ ಎಂಬುದು ಒಂದು ಮುಖ್ಯ ತತ್ವವಾಗಿದೆ. ಇದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಉದಾಹರಣೆ ನೀಡುತ್ತಾ ಹೇಳಿದರು: ಒಬ್ಬ ಸೈನಿಕ, ಅಥವಾ ಒಬ್ಬ ಜನರಲ್, ಅಧ್ಯಾಪಕ, ನ್ಯಾಯಾಧೀಶ, ವಕೀಲ, ವ್ಯಾಪಾರಿ, ವಿಧಾನಸಭೆಯ ಸ್ಕ್ರೆಟರಿ, ಸ್ಪೀಕರ್, ಮಂತ್ರಿ ಅಥವಾ ಯಾರೇ ಆಗಲಿ ನಿಷ್ಠಾವಂತನಾಗಿಯೂ ಹೃತ್ಪೂರ್ವಕವಾಗಿಯೂ ಕೆಲಸ ಮಾಡುವವರಾದರೆ ಮತ್ತು ಇಡೀ ದಿನ ಕೆಲಸ ಮಾಡಿದರೆ ಸಾಯಂಕಾಲ ಆಯಾಸಗೊಂಡು ಕುಳಿತುಕೊಂಡು ಹೇಳುತ್ತಾರೆ, ಇಡೀ ದಿನ ಮಾಡಿದ ಕೆಲಸ ನಮ್ಮ

ಸೊಂಟವನ್ನು ಮುರಿದಿದೆ ಎಂದು. ಆದರೆ ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡಿರಿ. ಅವರು ನಮಗೆ ತೋರಿಸಿಕೊಟ್ಟಿರುವ ಉತ್ತಮ ಮಾದರಿ ಹೇಗಿದೆ ಎಂದರೆ, ಲೋಕದ ವಿವಿಧ ವಿಭಾಗಗಳ ಜನರು ಮಾಡುತ್ತಿರುವ ಎಲ್ಲ ಕೆಲಸಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರೆಲ್ಲರಿಗಿಂತಲೂ ಉತ್ತಮವಾಗಿ ಮಾಡುತ್ತಿರುವುದಾಗಿ ಕಾಣಿಸುತ್ತದೆ. ಅದರೊಂದಿಗೆ ಅವರು ಮನೆಯ ಕೆಲಸ ಸಹ ಮಾಡುತ್ತಿದ್ದರು. ಅವರು ತನ್ನ ಪತ್ನಿಯರಿಗೆ ಸಹಾಯ ಮಾಡುತ್ತಿದ್ದರು. ಎಷ್ಟು ಲಕ್ಷ್ಯಗೊಟ್ಟು ಮನೆ ಕೆಲಸ ಮಾಡುತ್ತಿದ್ದರೆಂದರೆ ಪ್ರತಿಯೊಬ್ಬ ಪತ್ನಿ 'ನಾನೇ ಅವರ ಹೆಚ್ಚಿನ ಶ್ರದ್ಧೆಗೆ ಪಾತ್ರಳಾಗಿರುವೆ' ಎಂದು ಯೋಚಿಸುತ್ತಿದ್ದರು. ಅಸರ್ ನಮಾಝ್ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಎಲ್ಲ ಪತ್ನಿಯರ ಮನೆಗಳಿಗೆ ಹೋಗಿ ಅವರ ಆವಶ್ಯಕತೆಗಳ ಬಗ್ಗೆ ವಿಚಾರಿಸುತ್ತಿದ್ದರು. ಕೆಲವು ಸಾರಿ ಮನೆಗೆಲಸದಲ್ಲಿ ಅವರಿಗೆ ಸಹಾಯ ಸಹ ಮಾಡುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನಗೆ ನೆನಪಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಗೆ ಕೆಲಸ ಮಾಡುತ್ತಿದ್ದರೆಂದರೆ ನಾವು ನಿದ್ರಿಸಲು ಮಲಗುವಾಗ ಅವರು ಕೆಲಸ ಮಾಡುತ್ತಿರುವುದಾಗಿ ಕಾಣುತ್ತಿದ್ದೆವು. ನಾವು ನಿದ್ರೆಯಿಂದ ಎಚ್ಚೆತ್ತು ಕಣ್ಣು ತೆರೆದಾಗ ಸಹ ಅವರು ಕೆಲಸ ಮಾಡುತ್ತಿರುವುದಾಗಿ ಕಾಣುತ್ತಿದ್ದೆವು. ಅವರು ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದರೂ, ಉದಾಹರಣೆಗೆ ಅವರ ಗ್ರಂಥಗಳ ಪ್ರೂಫ್ ರೀಡಿಂಗ್ ಕೆಲಸ ಮಾಡುತ್ತಿದ್ದ ಸ್ನೇಹಿತರ ಬಗ್ಗೆ ಸಹ ಅವರಿಗೆ ಎಷ್ಟು ಕಾಳಜಿ ಇತ್ತೆಂದರೆ ಇಶಾ ನಮಾಝ್ ಸಮಯ ಯಾರಾದರೂ ಬಂದು ನಾನು ಗ್ರಂಥದ ಪ್ರೂಫ್ ತಿದ್ದಿ ತಂದಿದ್ದೇನೆ ಎಂದು ಮನೆ ಬಾಗಿಲಿಗೆ ಬಂದು ಕೂಗಿ ಹೇಳಿದಾಗ ಅವರು ಮಂಚದಿಂದ ಎದ್ದು ಬಾಗಿಲಿನ ಬಳಿಗೆ ಬರುವಾಗ ಅನೇಕ ಸಾರಿ ಜಝಾಕಲ್ಲಾಹ್– ನಿಮಗೆ ಬಹಳ ತೊಂದರೆ ಆಯಿತು ಎಂದು ಹೇಳುತ್ತಾ ಇದ್ದರು. ಆದರೆ ಪ್ರೂಫ್ ರೀಡಿಂಗ್ ಮಾಡುವವರು ಮಾಡುತ್ತಿದ್ದ ಕೆಲಸ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲಸದ ಎದುರಿಗೆ ಏನೂ ಆಗಿರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾಡುತ್ತಿದ್ದ ಕೆಲಸವನ್ನು ನೋಡಿದ ನಮಗೆ ಆಶ್ಚರ್ಯವಾಗುತ್ತಿತ್ತು.

ಇಸ್ಲಾಮ್ ಧರ್ಮದಲ್ಲಿ ಮಹಿಳೆಯರ ಮುಂದಿನ ಜೀವನದ ಸಂರಕ್ಷಣೆಗೆ ವಿವಿಧ ವ್ಯವಸ್ಥೆಗಳಿವೆ. ಅದರಲ್ಲಿ ಒಂದು ವಿವಾಹದ ಸಂದರ್ಭದಲ್ಲಿ ಮಹರ್ ನಿಶ್ಚಯಿಸುವುದಾಗಿದೆ. ಅದನ್ನು ಪಾವತಿ ಮಾಡುವುದು ಆವಶ್ಯಕವಾಗಿದೆ. ಕೆಲವರು ಭಾವಿಸುವುದು ತಲಾಖ್ ಸಂದರ್ಭದಲ್ಲಿ ಅದನ್ನು ಪಾವತಿಸಿದರೆ ಸಾಕು ಎಂದಾಗಿದೆ. ಮಹರಿನ ಉದ್ದೇಶವೇನು? ಇದು ಮಹಿಳೆಯ ಕೈಯಲ್ಲಿ ಇರಬೇಕಾದ ಹಣವಾಗಿದೆ. ಕೆಲವು ಸಂದರ್ಭಗಳಲ್ಲಿ ಯಾವುದಾದರೂ ವಿಶಿಷ್ಟ ಆವಶ್ಯಕತೆ ಉಂಟಾಗಬಹುದು. ಅದರ ಬಗ್ಗೆ ತನ್ನ ಪತಿಯೊಂದಿಗೆ ಹೇಳಲು ಪತ್ನಿ ನಾಚಿಕೆ ಪಡಬಹುದು. ಅಂತಹ ಸಂದರ್ಭದಲ್ಲಿ ಆ ಹಣದಿಂದ ಖರ್ಚು ಮಾಡಬಹುದು. ಕೆಲವು ಸಾರಿ ಪತಿಗೆ ಯಾವುದಾದರೂ ಹಣದ ಆವಶ್ಯಕತೆ ಉಂಟಾದರೆ ಆ ಸಮಯ ಪತ್ನಿಯ ಕೈಯಲ್ಲಿ ಹಣವಿದ್ದರೆ ಆಕೆ ಪತಿಗೆ ಸಹಾಯ ಮಾಡಬಹುದಾಗಿದೆ. ಆಕೆ ತನ್ನ ಸ್ವಂತ ಆವಶ್ಯಕತೆಗಳನ್ನೂ ಈಡೇರಿಸಬಹುದು. ಮಹರ್ ಕೊಡದಿದ್ದರೆ ಈ ಆವಶ್ಯಕತೆಗಳು ಮತ್ತು ಬೇರೆ ಹಲವು ಆವಶ್ಯಕತೆಗಳು ಈಡೇರಲಾರವು. ಕೆಲವು ಪತಿಯಂದಿರು ಹೇಗಿರುತ್ತಾರೆಂದರೆ ಅವರು ಮಹರ್ ಕೊಡುವ ವಿಷಯವಂತೂ ಇರಲಿ, ಪತ್ನಿ ಸಂಪಾದಿಸುತ್ತಿದ್ದರೆ ಆಕೆಯ ಮೇಲೆ ನಿರ್ಬಂಧ ಹೇರುತ್ತಾರೆ. ನೀನು ನನ್ನೊಂದಿಗೆ ಕೇಳದೆ ಖರ್ಚು ಮಾಡಬಾರದು ಎಂದು. ಅಥವಾ ನಿನ್ನ ಸಂಪಾದನೆಯಲ್ಲಿ ಇಷ್ಟು ಭಾಗ ನನಗೆ ಸಿಗಬೇಕು. ನನ್ನ ಬ್ಯಾಂಕ್ ಖಾತೆಯಲ್ಲಿ ಜಮಾಯಿಸಬೇಕು ಎಂದು ಹೇಳುತ್ತಾರೆ. ಹೀಗೆಲ್ಲಾ ಮಾಡುವುದು ಸಂಪೂರ್ಣ ತಪ್ಪು ಕೆಲಸವಾಗಿದೆ. ಕೆಲವರು ತಮ್ಮ ಹೆಣ್ಣು ಮಕ್ಕಳಿಗೆ ಲಭಿಸುವ ಮಹರ್ ಸ್ವತಃ ತೆಗೆದುಕೊಳ್ಳುತ್ತಾರೆ. ಇದು ಸಹ ತಪ್ಪು ಕೆಲಸವೇ ಆಗಿದೆ. ಇದು ಕನ್ಯಾವಿಕ್ರಯವಾಗಿದೆ. ಇದು ಯಾವ ರೀತಿಯಲ್ಲೂ ಸರಿಯಾದುದಲ್ಲ. ಕೆಲವು ಸಾರಿ ಮಹಿಳೆ ತನ್ನ ಪತಿಗೆ ಮಹರನ್ನು ಕ್ಷಮಿಸಿ ಬಿಡುತ್ತಾರೆ. ಆದರೆ ಇದಕ್ಕೆ ಕೆಲವು ಶರತ್ತುಗಳಿವೆ. ಮೊದಲು ಮಹರನ್ನು ಪತ್ನಿಯ ಕೈಯಲ್ಲಿ ಇರಿಸಿ ಅನಂತರ ಕೇಳಬೇಕು. ವಾಸ್ತವಿಕ ವಿಷಯವೇನೆಂದರೆ ಅಂತಹ ಸಂದರ್ಭದಲ್ಲಿ ಮಹರ್ ಹಣ ಮಹಿಳೆಯ ಕೈಯಲ್ಲಿ ಒಂದು ವರ್ಷ ಇರಬೇಕು. ಅನಂತರ ಆಕೆ ಅದನ್ನು ಪತಿಗೆ ಬಿಟ್ಟು ಕೊಡುವುದಾದರೆ ಅದು ಸರಿಯಾದ ಕ್ರಮವಾಗಿದೆ.

ಮತ್ತೊಂದು ಝಕಾತ್ ಆಗಿದೆ. ಇದು ಕಡ್ಡಾಯ ಕರ್ಮಗಳಲ್ಲಿ ಸೇರಿದೆ. ಅದರ ಶರತ್ತುಗಳನ್ನು ಈಡೇರಿಸುವವರಿಗೆ ಅದು ಕಡ್ಡಾಯವಾಗಿದೆ. ಆದರೆ ತಮಗೆ ಲಭಿಸುವ ಎಲ್ಲ ಹಣವನ್ನೂ ಧರ್ಮ ಕಾರ್ಯಕ್ಕೋಸ್ಕರ ವಿನಿಯೋಗಿಸುತ್ತಿರುವ ಕೆಲವು ಹಿರಿಯ ಮಹಾನುಭಾವರು ಸಹ ಇದ್ದಾರೆ. ಇಂತಹ ಒಬ್ಬ ಹಿರಿಯರ ಕಥೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: ಅಲ್ಲಾಹನು ಇಂತಹ ಮಹಾನುಭಾವರನ್ನು ಜನರಿಗೆ ಮಾದರಿಯಾಗಿ ಸೃಷ್ಟಿಸಿರುತ್ತಾನೆ ಎನ್ನುವುದರ ಬಗ್ಗೆ ಸಂಶಯವಿಲ್ಲ. ನಾನು ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುವುದನ್ನು ಕೇಳಿರುವೆನು. ಒಬ್ಬ ಮನುಷ್ಯ ಒಬ್ಬ ಹಿರಿಯರೊಂದಿಗೆ ಕೇಳಿದನು: ಎಷ್ಟು ರೂಪಾಯಿಗಳಿಗೆ ಝಕಾತ್ ಕೊಡಬೇಕು? ಎಂದು. ಅವರು ಹೇಳಿದರು: ನಿನಗೆ ಸಂಬಂಧಿಸಿ ಹೇಳುವುದಾದರೆ ನಲ್ವತ್ತು ರೂಪಾಯಿಗಳಿಗೆ ಒಂದು ರೂಪಾಯಿ ಝಕಾತ್ ಕೊಡಬೇಕು. ಆಗ ಆ ಮನುಷ್ಯ ಕೇಳಿದನು: ನೀವು ಹೇಳಿದಿರಿ ನಿನಗೆ ಸಂಬಂಧಿಸಿ ಎಂದು. ಇದರ ಅರ್ಥವೇನು? ಝಕಾತ್ ಎಂಬುದು ಪ್ರತಿಯೊಬ್ಬನಿಗೆ ಸಂಬಂಧಿಸಿ ಬದಲಾಗುತ್ತಾ ಇರುತ್ತದೆಯೇ? ಆಗ ಆ ಹಿರಿಯರು ಹೇಳಿದರು ನಿನ್ನ ಬಳಿ ನಲ್ವತ್ತು ರೂಪಾಯಿಗಳಿದ್ದರೆ ಅದರಲ್ಲಿ ಒಂದು ರೂಪಾಯಿ ಝಕಾತ್ ಕೊಡುವುದು ನಿನಗೆ ಆವಶ್ಯಕವಾಗಿದೆ. ಆದರೆ ನನ್ನ ಬಳಿ ನಲ್ವತ್ತು ರೂಪಾಯಿಗಳಿದ್ದರೆ ನಾನು ನಲ್ವತ್ತೊಂದು ರೂಪಾಯಿ ಕೊಡುವುದು ಅನಿವಾರ್ಯವಾಗಿದೆ. ನಿನ್ನ ಸ್ಥಿತಿ ಹೇಗಿದೆ ಎಂದರೆ ಅಲ್ಲಾಹನು ಹೇಳಿರುವನು: ನೀನು ಸಂಪಾದಿಸು ಮತ್ತು ತಿನ್ನು. ಆದರೆ ನನ್ನ ಸ್ಥಿತಿ ಹೇಗಿದೆ ಎಂದರೆ ನನ್ನ ಖರ್ಚುವೆಚ್ಚಗಳನ್ನು ಅಲ್ಲಾಹನೇ ನೋಡಿಕೊಳ್ಳುತ್ತಿದ್ದಾನೆ. ಆದುದರಿಂದ ನಾನು ನಲ್ವತ್ತು ರೂಪಾಯಿಗಳನ್ನು ಅವಿವೇಕದಿಂದ ಜಮಾಯಿಸಿದರೆ ಸಹ ನಾನು ಆ ನಲ್ವತ್ತು ರೂಪಾಯಿಗಳನ್ನು ಝಕಾತ್ ಆಗಿ ಕೊಡಬೇಕಾಗುತ್ತದೆ. ಮತ್ತು ಒಂದು ರೂಪಾಯಿ ಅದಕ್ಕೆ ದಂಡವಾಗಿ ಹೆಚ್ಚಿಗೆ ನೀಡಬೇಕಾಗುತ್ತದೆ. ಇದು ಅಂತಹ ಹಿರಿಯ ಮಹಾನುಭಾವರ ಸ್ಥಿತಿಯಾಗಿದೆ. ಬೇರೆ ಜನರು ಲೌಕಿಕ ಸಂಪಾದನೆಯಲ್ಲಿ ನಿರತರಾಗಬೇಕು ಹಾಗೂ ತಮ್ಮ ಸಂಪತ್ತು ಮತ್ತು ಸಮಯದ ಸ್ವಲ್ಪ ಭಾಗ ಆರಾಧನೆ ಮತ್ತು ಧಾರ್ಮಿಕ ಕೆಲಸಗಳಿಗೋಸ್ಕರ ಖರ್ಚು ಮಾಡಬೇಕು. ಇಸ್ತಿಗ್‌ಫಾರ್ ಮಾಡಬೇಕು; ದುಆ ಮಾಡಬೇಕು. ಅಲ್ಲಾಹನು ಅವರಿಗೆ ನೀಡಿದ ಗೌರವ, ಸಂಪತ್ತು ಮತ್ತು ಪ್ರಸಿದ್ಧಿಯನ್ನು ಅಲ್ಲಾಹನಿಂದ ದೊರೆತ ಔದಾರ್ಯವೆಂದು

ಗಣಿಸಬೇಕು. ಈ ಔದಾರ್ಯಕ್ಕೆ ಕೃತಜ್ಞತೆ ಅರ್ಪಿಸುವುದು ಹೇಗೆಂದರೆ ಅನ್ಯರ ಬಗ್ಗೆಯೂ ಗಮನ ಹರಿಸಬೇಕು. ಕೆಲವು ಜನರು ಹೆಚ್ಚಾಗಿ ವ್ಯಾಪಾರ ಮನೋಭಾವದವರಾಗಿದ್ದಾರೆ. ಅವರು ಅನ್ಯರನ್ನು ಅನುಕರಿಸಿ ಎಂತಹ ಕೆಲಸ ಮಾಡುತ್ತಾರೆಂದರೆ ಅದು ನಮ್ಮ ಜಮಾಅತಿನ ಸಂಪ್ರದಾಯಗಳಿಗೆ ವಿರುದ್ಧವಾಗಿರುತ್ತವೆ. ಅಥವಾ ಇಸ್ಲಾಮೀ ಉಪದೇಶಗಳಿಗೆ ಅನುಯೋಜ್ಯವಾಗಿರುವುದಿಲ್ಲ. ಇಂತಹ ಜನರು ಹುದ್ದೇದಾರರಲ್ಲೂ ಇದ್ದಾರೆ. ಕೆಲವು ಸಾರಿ ಪ್ರಾದೇಶಿಕ ಅಂಜುಮನ್‌ಗಳು ಸಹ ಇಂತಹ ಕೆಲಸ ಮಾಡುತ್ತವೆ. ಒಂದು ತಾತ್ವಿಕ ವಿಷಯವೇನೆಂದರೆ ನಮ್ಮ ತತ್ವೋಪದೇಶಗಳಿಗೂ ಸಂಪ್ರದಾಯಗಳಿಗೂ ವಿರುದ್ಧವಾಗಿರುವವುಗಳನ್ನು ಬಿಟ್ಟು ಬಿಡಲು ನಾವು ಪ್ರಯತ್ನಿಸುತ್ತಿರಬೇಕು. ನಾವು ಲೌಕಿಕ ವ್ಯವಹಾರಗಳಲ್ಲೂ ಬೇರೆ ವ್ಯವಹಾರಗಳಲ್ಲೂ ಯಾರನ್ನಾದರೂ ಅನುಕರಣೆ ಮಾಡಬೇಕಾಗಿದ್ದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಕರಣೆ ಮಾಡಬೇಕೆಂದು ಅಲ್ಲಾಹನು ಹೇಳಿದ್ದಾನೆ. ಅವರ ಮಾದರಿ ಅತ್ಯುತ್ತಮವೆಂದು ಅಲ್ಲಾಹನು ಹೇಳಿದ್ದಾನೆ. ಅಥವಾ ಈ ಕಾಲದಲ್ಲಿ ಅಲ್ಲಾಹನು ನಮ್ಮ ಮುಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾದರಿಯನ್ನು ಇರಿಸಿದ್ದಾನೆ. ಅವರು ತನ್ನ ಯಜಮಾನರಿಂದ ಕಲಿತುದನ್ನು ನಮಗೆ ತಿಳಿಸಿದ್ದಾರೆ. ಅದರ ಪ್ರಕಾರ ನಾವು ಕಾರ್ಯನಿರತರಾಗಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತದ ಕೊನೆಯ ವರ್ಷದಲ್ಲಿ ಅಥವಾ ಪ್ರಥಮ ಖಿಲಾಫತ್ ಕಾಲದ ಪ್ರಥಮ ವರ್ಷದ ರಮಝಾನಿನಲ್ಲಿ, ಅದು ಸೆಖೆಗಾಲವಾಗಿತ್ತು. ಆಗ ಒಂದು ದಿನ ನನಗೆ ಸಹ್ರಿ ಸಮಯದಲ್ಲಿ ನೀರು ಕುಡಿಯಲು ಸಾಧ್ಯವಾಗಿರಲಿಲ್ಲ. ನನಗೆ ಬಹಳ ದಾಹವಾಗುತ್ತಿತ್ತು. ನನಗೆ ಪ್ರಜ್ಞೆ ತಪ್ಪುವುದೋ ಎಂದು ನಾನು ಹೆದರುತ್ತಿದ್ದೆ. ಸೂರ್ಯಾಸ್ತಮನವಾಗಲು ಒಂದು ಗಂಟೆ ಬಾಕಿಯಾಗಿತ್ತು. ನಾನು ಆಯಾಸಗೊಂಡು ಒಂದು ಮಂಚದ ಮೇಲೆ ಬಿದ್ದೆನು. ಆಗ ನಾನೊಂದು ಕಶ್‌ಫ್ (ದಿವ್ಯದರ್ಶನ) ಕಂಡೆನು. ನನ್ನ ಬಾಯಿಗೆ ಯಾರೋ ನೀರು ಹಾಕಿದರು. ನಾನು ಅದನ್ನು ಕುಡಿದಾಗ ನನ್ನ ಬಾಯಾರಿಕೆ ನೀಗಿತು. ನನ್ನ ಕಶ್‌ಫ್ ಸ್ಥಿತಿ ಕೊನೆಗೊಂಡಾಗ ನನಗೆ ದಾಹ ಇರಲೇ ಇಲ್ಲ. ಅಲ್ಲಾಹನು ಈ ರೀತಿ ನನ್ನ ದಾಹ ಶಮನ ಮಾಡಿದನು. ನನಗೆ ದಾಹ ಶಮನವಾದ ಕಾರಣ ನೀರು ಕುಡಿಯುವ ಆವಶ್ಯಕತೆ ಇರಲಿಲ್ಲ. ದಾಹವಿರುವಾಗ ನೀರಿನ ಆವಶ್ಯಕತೆ ಉಂಟಾಗಿತ್ತು. ಒಂದು ವಸ್ತುವಿನ ಆವಶ್ಯಕತೆ ಇಲ್ಲದಿರುವಾಗ ಅದರ ಯೋಚನೆ ಇರುವುದಿಲ್ಲ. ಯಾವಾಗಲೂ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು. ಮುಖ್ಯವಾದುದೇನೆಂದರೆ ಅಲ್ಲಾಹನ ಸಂಪ್ರೀತಿ ಮತ್ತು ಅವನ ತೀರ್ಮಾನಕ್ಕೆ ಮಹತ್ವ ನೀಡಿ ಪ್ರಾರ್ಥಿಸಬೇಕು.

ನನಗೆ ಕೆಲವರು ಪತ್ರ ಬರೆಯುತ್ತಾರೆ, ಇಂತಿಂತಹ ಸ್ಥಳದಲ್ಲಿ ನನಗೆ ವಿವಾಹ ಸಂಬಂಧವಾಗಬೇಕು. ಅದರ ಬಗ್ಗೆ ಪ್ರಾರ್ಥಿಸಿರಿ ಮತ್ತು ಪ್ರಯತ್ನಿಸಿರಿ. ತಂದೆ ತಾಯಿಯರೊಂದಿಗೆ ಹೇಳಿರಿ ಮತ್ತು ಜಮಾಅತಿನ ನಿಝಾಮ್‌ನೊಂದಿಗೆ ಸಹ ಹೇಳಿರಿ. ಇದು ಸಂಭವಿಸದಿದ್ದರೆ ನಾನು ಸಾಯುವೆನು. ಇನ್ನೊಂದು ವ್ಯಕ್ತಿ ಸಹ ಸಾಯುವುದು ಎಂದೆಲ್ಲಾ ಬರೆಯುತ್ತಾರೆ. ಇವುಗಳೆಲ್ಲಾ ನಿರರ್ಥಕ ಮಾತುಗಳಾಗಿವೆ. ವಿವಾಹದ ಮುಖ್ಯ ಉದ್ದೇಶ ಮಾನಸಿಕ ನೆಮ್ಮದಿ ಮತ್ತು ವಂಶ ವೃದ್ಧಿಯಾಗಿದೆ. ಅಲ್ಲಾಹನಿಂದ ಅವನ ಅನುಗ್ರಹ ಬೇಡಿಕೊಳ್ಳಬೇಕು. ಅಲ್ಲಾಹನ ದೃಷ್ಟಿಯಲ್ಲಿ ಉತ್ತಮವಾಗಿದ್ದರೆ ಸಂಬಂಧ ಸ್ಥಾಪಿತವಾಗಲಿ. ಇಲ್ಲದಿದ್ದರೆ ಈ ವಿಷಯ ಮನಸ್ಸಿನಿಂದ ದೂರವಾಗಲಿ ಎಂದು ಪ್ರಾರ್ಥಿಸಬೇಕು. ಪ್ರೇಮ ಪ್ರಸಂಗಗಳು ತಾತ್ಕಾಲಿಕವಾಗಿರುತ್ತವೆ. ಲೌಕಿಕ ಪ್ರೀತಿಯನ್ನು ಸಹ ಅಲ್ಲಾಹನ ಪ್ರೀತಿಗಳಿಸಲು ಬೇಡಿಕೊಳ್ಳಬೇಕು. ಈ ರೀತಿ ಮಾಡಿದರೆ ಲೌಕಿಕ ಪ್ರೀತಿ ಸಹ ಅನುಗ್ರಹೀತವಾಗುವುದು ಮತ್ತು ಯಾವಾಗಲೂ ಅದು ಹೃದಯಕ್ಕೆ ನೆಮ್ಮದಿ ನೀಡುವುದು.

ಲೋಕದ ಯಾವುದೇ ವಸ್ತು ತನ್ನೊಳಗೆ ಹಾನಿಕಾರಕವಾದುದನ್ನು ಹೊಂದಿಲ್ಲ ಎಂಬುದರ ಉದಾಹರಣೆ ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕುಚ್‌ಲಾ ಎಂಬ ಪದಾರ್ಥ ಅದು ವಿಷವಾಗಿದೆ. ಅದನ್ನು ತಿಂದವರು ಹಲವರು ಸತ್ತಿದ್ದಾರೆ. ಆದರೆ ಲಕ್ಷಾಂತರ ಮಂದಿ ಅದನ್ನು ಔಷಧಿ ರೂಪದಲ್ಲಿ ಉಪಯೋಗಿಸಿ ಲಾಭಗಳಿಸುತ್ತಾರೆ. ಇದೇ ರೀತಿ ಅಫೀಮು ಸಹ ಬಹಳ ವಿನಾಶಕಾರಿ ವಸ್ತುವಾಗಿದೆ. ಆದರೆ ಅದರಿಂದ ಲಭಿಸುವ ಪ್ರಯೋಜನವು ಅದರಿಂದುಂಟಾಗುವ ದೋಷದ ಗುಣಕ್ಕಿಂತ ಎಷ್ಟೋ ಹೆಚ್ಚಿಗೆ ಇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು: ವೈದ್ಯರು ಹೇಳುತ್ತಾರೆ ಔಷಧಿಗಳ ಪೈಕಿ ಅರ್ಧಾಂಶ ಔಷಧಿಗಳಲ್ಲಿ ಅಫೀಮಿನ ಉಪಯೋಗವಾಗುತ್ತದೆ. ಅದರಿಂದ ಎಷ್ಟು ಪ್ರಯೋಜನ ಸಿಗುತ್ತದೆ ಎಂದು ಅಂದಾಜುಮಾಡಲು ಸಾಧ್ಯವಿಲ್ಲ. ಆದುದರಿಂದ ಲೋಕದಲ್ಲಿ ಯಾವುದೇ ವಸ್ತು ಸ್ವತಃ ಹಾನಿಕಾರಕವಾಗಿರುವುದಿಲ್ಲ. ಅದರ ತಪ್ಪಾದ ಉಪಯೋಗ ಹಾನಿಕರವಾಗುತ್ತದೆ. ಅದು ಮನುಷ್ಯನು ಮಾಡುವ ತಪ್ಪಿನ ಪರಿಣಾಮವಾಗಿರುತ್ತದೆ.

ಆದುದರಿಂದ ಸತ್ಯವಿಶ್ವಾಸಿ ನೆನಪಿಡಬೇಕಾದುದು ಏನೆಂದರೆ ಯಾವುದಾದರೂ ಕೆಲಸದ ಉತ್ತಮ ಪರಿಣಾಮ ದೊರೆತರೆ ಅಲ್‌ಹಮ್‌ದುಲಿಲ್ಲಾಹ್ ಅಲ್ಲಾಹನು ನನಗೆ ಯಶಸ್ಸು ನೀಡಿದನು ಎಂದು ಹೇಳಬೇಕು. ಪರಿಣಾಮ ಕೆಟ್ಟದಾದರೆ ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್ ಎಂದು ಹೇಳಬೇಕು. ಮತ್ತು ನಾನು ನನ್ನ ತಪ್ಪುಗಳ ಕಾರಣದಿಂದ ಸೋತು ಹೋದೆನು ಎಂದು ಹೇಳಬೇಕು. ಯಾರು ತಪ್ಪುಗಳಿಗೆ ತನ್ನನ್ನು ಹೊಣೆಗಾರನನ್ನಾಗಿ ಮಾಡುತ್ತಾನೋ ಮತ್ತು ಜಯಲಭಿಸಿದಾಗ ಅಲ್‌ಹಮ್‌ದುಲಿಲ್ಲಾಹ್ ಎಂದು ಹೇಳುತ್ತಾನೋ ಅವನಿಗೆ ಅಲ್ಲಾಹನಿಂದ ಅನುಗ್ರಹ ಲಭಿಸುತ್ತದೆ. ಹೀಗೆ ಹೇಳುವವರಿಗೆ ಅಲ್ಲಾಹನು ಮತ್ತಷ್ಟು ದಯೆದೋರುತ್ತಾನೆ. ಮತ್ತು ಹೇಳುತ್ತಾನೆ: ನನ್ನ ದಾಸನು ತನ್ನ ಜಯಗಳನ್ನು ನನಗೆ ಅನ್ವಯಿಸಿ ಹೇಳುತ್ತಾನೆ. ನಾನು ಅವನಿಗೆ ಇನ್ನಷ್ಟು ಜಯ ನೀಡುವೆನು ಎಂದು. ಕೆಲವು ಸಾಮಾನ್ಯ ವಿಷಯಗಳಿಂದ ಬಹಳ ದೊಡ್ಡ ಪರಿಣಾಮಗಳು ಉಂಟಾಗುತ್ತವೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಖುತ್‌ಬದಲ್ಲಿ ಹೀಗೆ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಒಂದು ಕಥೆ ಹೇಳಿದ್ದರು: ಒಬ್ಬ ಮಹಿಳೆಯ ಒಬ್ಬನೇ ಮಗ ಯುದ್ಧಕ್ಕೆ ಹೊರಟಾಗ ತನ್ನ ತಾಯಿಯೊಂದಿಗೆ ಹೇಳಿದನು– ನಾನು ಮರಳಿ ಬರುವಾಗ ನಿಮಗೆ ಪಾರಿತೋಷಿಕವಾಗಿ ಏನನ್ನು ತರಬೇಕು ಎಂದು ಕೇಳಿದನು. ಆಗ ಆ ಮಹಿಳೆ ಹೇಳಿದಳು: ನೀನು ನನಗೆ ಏನಾದರೂ ತರಲೇಬೇಕೆಂದು ಬಯಸುವುದಾದರೆ ಕರಿದು ಹೋದ ರೊಟ್ಟಿಯ ತುಂಡುಗಳನ್ನು ಸಾಧ್ಯವಿರುವಷ್ಟು ಹೆಚ್ಚಿಗೆ ಜಮಾಯಿಸಿ ತರಬೇಕು. ಅವುಗಳನ್ನು ತಂದರೆ ನಾನು ಸಂತೋಷಪಡುವೆನು ಎಂದು ಹೇಳಿದಳು. ಸ್ವಲ್ಪ ಕಾಲದ ನಂತರ ಅವನು ಮರಳಿ ಮನೆಗೆ ಬಂದಾಗ ಕರಿದು ಹೋದ ರೊಟ್ಟಿಯ ತುಂಡುಗಳನ್ನು ಕೆಲವು ಚೀಲಗಳಲ್ಲಿ ತುಂಬಿಸಿ ತಂದನು. ಅವುಗಳನ್ನು ನೋಡಿ ತಾಯಿಗೆ ಬಹಳ ಸಂತೋಷವಾಯಿತು. ಅವಳು ಹೇಳಿದಳು–

ಕರಿದುಹೋದ ರೊಟ್ಟಿಗಳ ತುಂಡುಗಳನ್ನು ತರಲು ನಾನು ಹೇಳಿದ್ದೇಕೆಂದರೆ, ನೀನು ರೊಟ್ಟಿ ಮಾಡುವಾಗ ಅದನ್ನು ಚೆನ್ನಾಗಿ ಬೇಯಿಸುವೆ. ಮತ್ತು ಅದರಿಂದ ಕರಿದುಹೋದುದನ್ನು ತೆಗೆದಿರಿಸಿ ಒಳ್ಳೆಯ ರೊಟ್ಟಿಗಳನ್ನು ತಿಂದು ನೀನು ಆರೋಗ್ಯವನ್ನು ಕಾಪಾಡಿಕೊಳ್ಳಲಿಕ್ಕಾಗಿಯೇ ನಾನು ಹಾಗೆ ಹೇಳಿದೆನು. ನಾನು ಹೇಳಿದ ಹಾಗೆ ನೀನು ಮಾಡಿರುವೆ, ಮತ್ತು ಆರೋಗ್ಯವಂತನಾಗಿರುವೆ. ಬಾಹ್ಯವಾಗಿ ಇದು ಚಿಕ್ಕ ವಿಷಯವಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರಾರ್ಥನೆ ಅಂಗೀಕಾರ ಪಡೆಯುವುದಕ್ಕೆ ಸಂಬಂಧಿಸಿ ಕೆಲವು ವಿಷಯಗಳನ್ನು ಜನರು ಚಿಕ್ಕದೆಂದು ಗಣಿಸುತ್ತಾರೆ. ಪ್ರಾರ್ಥನೆ ಅಂಗೀಕಾರ ಪಡೆಯಲು ಎರಡು ಮೂಲಭೂತ ಶರತ್ತುಗಳಿವೆ ಅವುಗಳನ್ನು ನೆನಪಿಡಬೇಕು. ಅಲ್ಲಾಹನು ಹೇಳುತ್ತಾನೆ: **ಫಲ್ ಯಸ್ತಜೀಬೂಲೀ ವಲ್ ಯೂಮಿನೂ ಬೀ** ನನ್ನ ಮಾತು ಅಂಗೀಕರಿಸಿರಿ ಮತ್ತು ನನ್ನನ್ನು ನಂಬಿರಿ ಎಂದು ಹೇಳಿದ್ದಾನೆ. ಇವುಗಳಲ್ಲದೆ ಬೇರೆ ಅನೇಕ ವಿಷಯಗಳಿವೆ. ದುರೂದ್ ಪ್ರಾರ್ಥನೆ ಮಾಡಬೇಕು. ಸದಖ (ದಾನಧರ್ಮ) ಕೊಡಬೇಕು.

ನನಗೆ ಹಲವರು ಬರೆಯುತ್ತಾರೆ, ನಾವು ಬಹಳ ಪ್ರಾರ್ಥಿಸಿದೆವು ಆದರೆ ನಮ್ಮ ಪ್ರಾರ್ಥನೆ ಅಂಗೀಕಾರ ಪಡೆಯಲಿಲ್ಲ ಎಂದು. ಇದು ಅಲ್ಲಾಹನ ಮೇಲೆ ದೋಷಾರೋಪವಾಗಿದೆ. ವಾಸ್ತವಿಕವಾಗಿ ಇದು ವಿಶ್ವಾಸದ ಬಲಹೀನತೆಯಾಗಿದೆ. ಸ್ವಲ್ಪ ಸಮಯದ ಹಿಂದೆ ಒಬ್ಬ ವ್ಯಕ್ತಿ ನನ್ನ ಬಳಿಗೆ ಬಂದು, ನಾನು ಬಹಳ ಪ್ರಾರ್ಥಿಸಿದೆ ಆದರೆ ನನ್ನ ಪ್ರಾರ್ಥನೆ ಅಂಗೀಕಾರವಾಗಲಿಲ್ಲ ಎಂದು ಹೇಳಿದನು. ನಾನು ಅವರೊಂದಿಗೆ ಹೇಳಿದೆ ಅಲ್ಲಾಹನು ಹೇಳುತ್ತಾನೆ: **ಫಲ್ ಯಸ್ತಜೀಬೂಲೀ** ಅವನು ನನ್ನ ಆಜ್ಞೆಗಳನ್ನು ಪಾಲಿಸಲಿ ಎಂದು. ನೀವು ಅಲ್ಲಾಹನ ಎಲ್ಲ ಆಜ್ಞೆಗಳನ್ನು ಪಾಲಿಸುತ್ತಿರುವಿರೋ ಎಂದು ನಾನು ಕೇಳಿದೆ. ಅವರು ಇಲ್ಲ ಎಂದು ಹೇಳಿದರು.

ಆದುದರಿಂದ ಮೊದಲು ನಾವು ನಮ್ಮ ಸ್ಥಿತಿಯನ್ನು ನೋಡಬೇಕು. ನಾವು ಎಷ್ಟರ ಮಟ್ಟಿಗೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತೇವೆ ಎಂದು ನೋಡಬೇಕು. ಅಲ್ಲಾಹನು ನಮಗೆ ಅವನ ಎಲ್ಲಾ ಆಜ್ಞೆಗಳನ್ನು ಪಾಲಿಸುವ ಭಾಗ್ಯ ಕರುಣಿಸಲಿ. ಅಲ್ಲಾಹನು ನಮ್ಮ ವಿಶ್ವಾಸವನ್ನು ಬಲಪಡಿಸಲಿ. ನಮ್ಮ ಪ್ರಾರ್ಥನೆಗಳನ್ನು ಅವನು ಅಂಗೀಕರಿಸುವಂತಾಗಲಿ – ಆಮೀನ್.

ಕೊನೆಗೆ ಹುಝೂರ್ ಹೇಳಿದರು: ಜುಮುಅ ನಮಾಝ್ ನಂತರ ಒಂದು ನಮಾಝೆ ಜನಾಝ ಗಾಯಿಬ್ ಇದೆ. ಸಯ್ಯಿದ್ ಅಸದುಲ್ ಇಸ್ಲಾಮ್ ಶಾ ಸಾಹೇಬರದ್ದು. ಅವರು ಗ್ಲಾಸ್‌ಗೋ ನಗರದ ಸಯ್ಯಿದ್ ನಈಮ್ ಶಾ ಸಾಹೇಬರ ಪುತ್ರರಾಗಿದ್ದಾರೆ. ಅವರ ತಂದೆ ಮತ್ತು ಅಜ್ಜ ಹಳೆಯ ಅಹ್ಮದಿ ಕುಟುಂಬದವರೂ ಜಮಾಅತಿಗೆ ಸೇವೆ ಮಾಡುವವರೂ ಆಗಿದ್ದಾರೆ. 2016 ಮಾರ್ಚ್ ದಿನಾಂಕ 24ರಂದು ನಲ್ವತ್ತು ವರ್ಷ ಪ್ರಾಯದಲ್ಲಿ ಒಬ್ಬ ದುಷ್ಟನ ಆಕ್ರಮಣಕ್ಕೆ ಅವರು ಬಲಿಯಾದರು. ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್.

ಅವರು ಖಾದಿಯಾನಿನ ಸದರ್ ಅಂಜುಮನ್ ಅಹ್ಮದಿಯಾದ ಪೆನ್‌ಶನರ್, ಡಾಕ್ಟರ್ ನಸೀರುದ್ದೀನ್ ಸಾಹೇಬ್ ಖಮರ್ ಅವರ ಅಳಿಯ ಆಗಿದ್ದರು. ರೀಜನಲ್ ಅಮೀರ್ ಹೇಳುತ್ತಾರೆ: ನಾನು ಕೊನೆಯಬಾರಿ ಅವರನ್ನು ಸಂದರ್ಶಿಸಿದಾಗ ಅವರು ಖಿಲಾಫತ್‌ನೊಂದಿಗೆ ತನ್ನ ಯಾವಾಗಲೂ ಇರುವ ಸಂಬಂಧವನ್ನು ಪ್ರಕಟಿಸಿದ್ದರು. ಅವರು ಜಮಾಅತ್ ಬಿಟ್ಟಿದ್ದರು ಎಂದು ಕೆಲವರು ತಪ್ಪಾಗಿ ಗ್ರಹಿಸಿದ್ದಾರೆ. ಆದರೆ ಹಾಗೆ ಆಗಿಲ್ಲ, ಅವರು ಅಹ್ಮದಿಯರಾಗಿದ್ದರು. ಅಹ್ಮದಿಯ್ಯತ್ತಿನ ಕಾರಣದಿಂದಲೇ ಅವರು ಶಹೀದ್ ಆದರು.

ಅಲ್ಲಾಹನು ಅವರಿಗೆ ಮಗ್‌ಫಿರತ್ ನೀಡಿ ಅವರ ಮೇಲೆ ದಯೆದೋರಲಿ. ಅವರ ಸಂಬಂಧಿಕರಿಗೂ ತಂದೆ ತಾಯಂದಿರಿಗೂ ಪತ್ನಿಗೂ ಸಹನೆಯನ್ನೂ ಶಾಂತಿಯನ್ನೂ ಅಲ್ಲಾಹನು ದಯಪಾಲಿಸಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 01-04-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon